# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ: 163,ಕತ್ರಿಗುಪ್ಪೆ, ಬೆಂಗಳೂರು.

### ಮೇ 2022ರ ಮಾಹೆಯ 2ನೇ ವಾರ್ಡ್ ಸಮಿತಿ ಸಭೆಯ ನಡವಳಿಗಳು

************

ಉಲ್ಲೇಖ: ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರ ಕಛೇರಿ ಆದೇಶದ ಸಂಖ್ಯೆ: ಬಿ12(5)/ಪಿಆರ್/35/2020-21, ದಿನಾಂಕ:22-09-2021.

******

ದಿನಾಂಕ: 21-05-2022.

ಸ್ಥಳ :ಬಿಬಿಎಂಪಿ ವಿವಿಧೋದ್ದೇಶ ಕಟ್ಟಡ, ಶ್ರೀಕಂಠೇಶ್ವರ ಪಾರ್ಕ್. ಕತ್ರಿಗುಪ್ಪೆ

ಸಮಯ :ಮಧ್ಯಾಹ್ನ 12.30 ಗಂಟೆಗೆ

ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳ ವಿವರ

| ಕ್ರ.ಸಂ | ಹೆಸರು | ಪದನಾಮ |
|---|---|---|
| 1 | ಶ್ರೀ ದಯಾನಂದ್. | ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ಕತ್ರಿಗುಪ್ಪೆ |
| 2 | ಶ್ರೀ ಧರಣೇಂದ್ರಕುಮಾರ್. | ಕಾರ್ಯಪಾಲಕ ಅಭಿಯಂತರರು, ಬಸವನಗುಡಿ ವಿಭಾಗ |
| 3 | ಶ್ರೀ ರಂಜಿತಾ | ಸಹಾಯಕ ಅಭಿಯಂತರರು. ಕಾರ್ಯದರ್ಶಿ ಮತ್ತು ಸಂಚಾಲಕರು ವಾರ್ಡ್-163, ಕತ್ರಿಗುಪ್ಪೆ |
| 4 | ಶ್ರೀ ಮಂಜುನಾಥ್ | ಟ್ರಾಫೀಕ್ ಪೋಲೀಸ್ ಬನಶಂಕರಿ ಸಂಚಾರಿ ಪೋಲೀಸ್ ಠಾಣೆ. |
| 5 | ಶ್ರೀ ಕುಮುದಾ.ಹೆಚ್ | ಕಿರಿಯ ಅಭಿಯಂತರರು,ಬಿ.ಡಬ್ಲ್ಯೂ.ಎಸ್.ಎಸ್.ಬಿ.ಕತ್ರಿಗುಪ್ಪೆ. |
| 6 | ಶ್ರೀ ಮಹೇಶ್.ಕೆ. | ಪೋಲೀಸ್ ಸಬ್-ಇನ್ಸ್‌ಪೆಕ್ಟರ್ ಚನ್ನಮ್ಮನಕೆರೆ ಪೋಲೀಸ್ ಠಾಣೆ. |
| 7 | ಶ್ರೀ ಗಂಗಾಧರ್‌ಗೌಡ | ಟ್ಯಾಕ್ಸ್ ಇನ್ಸ್‌ಪೆಕ್ಟರ್, ಕತ್ರಿಗುಪ್ಪೆ. |
| 8 | ಶ್ರೀ ಪ್ರದೀಪ್‌ಕುಮಾರ್ | ರೆವಿನ್ಯೂ ಇನ್ಸ್‌ಪೆಕ್ಟರ್, ಕತ್ರಿಗುಪ್ಪೆ. |
| 9 | ಶ್ರೀ ರಮೇಶ್ | ಎಸ್.ಡಿ.ಸಿ. ಕತ್ರಿಗುಪ್ಪೆ.ವಾರ್ಡ್-163 |
| 10 | ಶ್ರೀ ಹೇಮಚಂದ್ರ | ಆರೋಗ್ಯ ವೈದ್ಯಾಧಿಕಾರಿಗಳು ಕತ್ರಿಗುಪ್ಪೆ.ವಾರ್ಡ್-163 |
| 11 | ಶ್ರೀ ಉಮೇಶ್ | ಹಿರಿಯ ಆರೋಗ್ಯ ಪರಿವೀಕ್ಷಕರು ಕತ್ರಿಗುಪ್ಪೆ.ವಾರ್ಡ್-163 |
| 12 | ಶ್ರೀ ಧವಳೇಶ್ | ಸಹಾಯಕ ಅಭಿಯಂತರರು, ಬೆಸ್ಕಾಂ. |
| 13 | ಶ್ರೀ ರಘು | ವಾರ್ಡ್ ಸದಸ್ಯರುಕತ್ರಿಗುಪ್ಪೆ.ವಾರ್ಡ್-163 |

Scanned with CamScanner

ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ಆದ ಶ್ರೀ ದಯಾನಂದ್ ರವರು ಸ್ವ ಪರಿಚಯ ಮಾಡಿಕೊಂಡು ಸದಸ್ಯರೆಲ್ಲರಿಗೂ ಸ್ವಾಗತಕೋರಿ ಸಾರ್ವಜನಿಕರು ಹಾಗೂ ಅಧಿಕಾರಿಗಳೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು. ಸಭೆಯಲ್ಲಿ ಸಾರ್ವಜನಿಕರು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಲಾಗಿ, ಈ ಕೆಳಕಂಡ ಅಂಶಗಳ ಬಗ್ಗೆ ಕ್ರಮವಹಿಸುವಂತೆ ಸೂಚಿಸಲಾಯಿತು.

1. ಮಳೆಗಾಲ ಪ್ರಾರಂಭಗೊಂಡಿರುವ ಹಿನ್ನಲೆಯಲ್ಲಿ ಮಳೆ ನೀರು ರಸ್ತೆಗಳಲ್ಲಿ ಹಾಗೂ ತಗ್ಗುಪ್ರದೇಶಗಳಲ್ಲಿ ನಿಂತು, ಮನೆಗಳಿಗೆ ನುಗ್ಗುವಿಕೆಯನ್ನು, ವಾಹನ ಸಂಚಾರ ಹಾಗೂ ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗದಂತೆ, ರಸ್ತೆಗಳಲ್ಲಿ ತೊಳು ಚರಂಡಿಗಳನ್ನು ಶುಚಿಗೊಳಿಸಿ ಮಳೆ ನೀರು ಸರಾಗವಾಗಿ ಹರಿದು ಹೋಗಲು ವ್ಯವಸ್ಥೆ ಕಲ್ಪಿಸುವಂತೆ ಸಂಬಂಧಿಸಿದ ಅಭಿಯಂತರರಿಗೆ ಕ್ರಮವಹಿಸಲು ಮಾನ್ಯ ಅಧ್ಯಕ್ಷರು ಸೂಚಿಸಿದರು.

2. ಕತ್ರಿಗುಪ್ಪೆ ಮುಖ್ಯ ರಸ್ತೆಗಳಲ್ಲಿ ಎಲ್ಲೇಂದ್ದರಲ್ಲಿ ಕಸವನ್ನು ಹಾಕುತ್ತಿದ್ದು ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿದೆ ಎಂದು ಸಭೆಯಲ್ಲಿ ಚರ್ಚಿಸಲಾಯಿತು, ಅದರಂತೆ ಮುಂದಿನ ದಿನಗಳಲ್ಲಿ ಅಲ್ಲಿ ಕಸವನ್ನು ಹಾಕದಂತೆ ನಿಗಾವಹಿಸಬೇಕು ಮತ್ತು ಕಸ ಹಾಕುವವರ ಮೇಲೆ ದಂಡ ವಿಧಿಸಬೇಕೆಂದು ಸಂಬಂಧಪಟ್ಟ ಆರೋಗ್ಯ ಪರಿವೀಕ್ಷಕರಿಗೆ ಮಾನ್ಯ ಅಧ್ಯಕ್ಷರು ಸೂಚಿಸಿದರು.

3. ಕೆಂಪೇಗೌಡ ಬಡಾವಣೆ 5ನೇ ಮುಖ್ಯರಸ್ತೆಯಲ್ಲಿನ ಖಾಲಿ ನಿವೇಶನದಲ್ಲಿ ಕಸವನ್ನು ಹಾಕುತ್ತಿದ್ದು ಅದನ್ನು ಗಮನ ಹರಿಸಲಾಗಿದ್ದು ಕೂಡಲೇ ಅಲ್ಲಿರುವ ಕಸವನ್ನು ತೆಗೆಸಿ ಮುಂದೆ ಅಲ್ಲಿ ಕಸವನ್ನು ಹಾಕದಂತೆ ನೋಡಿಕೊಳ್ಳಬೇಕು ಮತ್ತು ಕಸ ಹಾಕುವವರಿಗೆ ಅರಿವು ಮೂಡಿಸಲು ಹಾಗೂ ಮರುಕಳಿಸಿದಲ್ಲಿ ಸದರಿಯವರುಗಳ ಮೇಲೆ ದಂಡ ವಿಧಿಸಬೇಕೆಂದು ಸಂಬಂಧಪಟ್ಟ ಆರೋಗ್ಯ ಪರಿವೀಕ್ಷಕರಿಗೆ ಮಾನ್ಯ ಅಧ್ಯಕ್ಷರು ಸೂಚಿಸಿದರು.

4. ರ್‍ಾಮರಾವ್ ಬಡಾವಣೆಯಲ್ಲಿರುವ ಆಟದ ಮೈದಾನದ ಸುತ್ತಮುತ್ತಲೂ ರಾತ್ರಿ ಸಮಯದಲ್ಲಿ ಕೆಲವು ಸಾರ್ವಜನಿಕರು ಮಧ್ಯಸೇವನೆ ಹಾಗೂ ಇತ್ಯಾದಿ ಚಟುವಟಿಕೆಗಳನ್ನು ನಡೆಸುತ್ತಿರುವುದಾಗಿ ಸಾರ್ವಜನಿಕರು ಮೌಕಿಕವಾಗಿ ದೂರು ನೀಡಿ ಕ್ರಮ ಕೈಗೊಳ್ಳುವಂತೆ ಕೋರಿರುವ ಹಿನ್ನಲೆಯಲ್ಲಿ ಸಭೆಯಲ್ಲಿ ಹಾಜರಿದ್ದ ಸಂಬಂಧಪಟ್ಟ ಪೋಲೀಸರು ಸದರಿ ಪ್ರದೇಶಗಳಲ್ಲಿ ಗಸ್ತು ತಿರುಗಲು ಹಾಗೂ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.

5. ವಾರ್ಡ್ ವ್ಯಾಪ್ತಿಯಲ್ಲಿ ಹಲವಾರು ಕಡೆಗಳಲ್ಲಿ ಓ.ಎಫ್.ಸಿ ಕೇಬಲ್‌ಗಳನ್ನು ಅಳವಡಿಸಲು ರಸ್ತೆ ಅಗೆತದ ಕಾಮಗಾರಿ ನಡೆಯುತ್ತಿದ್ದು, ಸದರಿ ರಸ್ತೆ ಅಗೆತದ ಕಾಮಗಾರಿಗೆ ಅನುಮತಿ ಪಡೆಯಲಾಗಿದೆಯೇ ಎಂಬುದರ ಬಗ್ಗೆ ಪರಿಶೀಲಿಸುವುದು ಹಾಗೂ ಕಾಮಗಾರಿ ನಿರ್ವಹಿಸಿದ ನಂತರ ಸದರಿ ರಸ್ತೆಯ ಭಾಗವನ್ನು ಪುನಃಸ್ಥಾಪಿಸಲು (restoration) ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲು ನಿರ್ದೇಶಿಸಲಾಯಿತು.

6. ವಾರ್ಡ್ ವ್ಯಾಪ್ತಿಯಲ್ಲಿರುವ ಬ್ಲಾಕ್ ಪಾಯಿಂಟ್‌ಗಳನ್ನು ಗುರುತಿಸಿ ಅಲ್ಲಿ ಸಿಸಿಟಿವಿ ಕ್ಯಾಮರಗಳನ್ನು ಅಳವಡಿಸಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಮಾನ್ಯ ಅಧ್ಯಕ್ಷರು ಸೂಚಿಸಿದರು.

7. ಬೆಸ್ಕಾಂ ಮತ್ತು ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ರಸ್ತೆಯನ್ನು ಕತ್ತರಿಸುವ ಅಥವಾ ಎಲ್ಲೆದ್ದರಲ್ಲಿ ಗುಂಡಿತೆಗೆಯುವ ಸಂಧರ್ಭದಲ್ಲಿ ಕಡ್ಡಾಯವಾಗಿ ಪಾಲಿಕೆಯಿಂದ ಅನುಮತಿ ಪಡೆದು ನಂತರ ಕಾಮಗಾರಿ ನೆಡೆಸಲು ಸಭೆಯಲ್ಲಿ ಮಾನ್ಯ ಅಧ್ಯಕ್ಷರು ಸೂಚಿಸಿರುತ್ತಾರೆ, ತಪ್ಪಿದ್ದಲ್ಲಿ ಸಂಬಂಧಪಟ್ಟ ಅಭಿಯಂತರರನ್ನೇ ನೇರ ಹೋಣೆಗಾರರನ್ನಾಗಿ ಮಾಡುವುದರ ಜೊತೆಗೆ ಎಫ್.ಐ.ಆರ್

Scanned with CamScanner

ದಾಖಲಿಸುವುದಾಗಿ ಸಭೆಯಲ್ಲಿ ಹಾಜರಿದ್ದ ಬೆಸ್ಕಾಂ ಮತ್ತು ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ಮಾನ್ಯ ಅಧ್ಯಕ್ಷರು ಸೂಚಿಸಿದರು.

8. ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ಮ್ಯಾನ್‌ಹೋಲ್‌ಗಳನ್ನು ಶುಚಿಗೊಳಿಸಿ ತೆಗೆದ ಮಣ್ಣನ್ನು ಕೂಡಲೇ ತೆರವುಗೊಳಿಸಲು ಕ್ರಮಕೈಗೊಳ್ಳಲು ಬಿ.ಡಬ್ಲ್ಯೂ.ಎಸ್.ಎಸ್.ಬಿ ಕಿರಿಯ ಅಭಿಯಂತರರಿಗೆ ಮಾನ್ಯ ಅಧ್ಯಕ್ಷರು ಸೂಚಿಸಿದರು.

9. ವಾರ್ಡ್‌ನಲ್ಲಿ ಕಂದಾಯ ಇಲಾಖೆಗೆ ಸಂಬಂಧಪಟ್ಟಂತೆ ಚರ್ಚಿಸಲಾಯಿತು ಅದರಂತೆ ಬಾಕಿ ಇರುವ ಕಂದಾಯವನ್ನು ಸಂಗ್ರಹಿಸಬೇಕೆಂದು ಸಭೆಯಲ್ಲಿ ಸಂಬಂಧಪಟ್ಟ ಕಂದಾಯ ಅಧಿಕಾರಿಗಳಿಗೆ ಮಾನ್ಯ ಅಧ್ಯಕ್ಷರು ಸೂಚಿಸಿದರು.

ವಂದನೆಗಳೊಂದಿಗೆ ಈ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

21/05/2022

ಕಾರ್ಯದರ್ಶಿಗಳು
ಹಾಗೂ ಸಹಾಯಕಅಭಿಯಂತರರು
ವಾರ್ಡ್ ಸಂಖ್ಯೆ: 163, ಕತ್ರಿಗುಪ್ಪೆ.

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ: 163, ಕತ್ರಿಗುಪ್ಪೆ.

ಪ್ರತಿಯನ್ನು:

1.ಮಾನ್ಯ ಆಯುಕ್ತರು, ಬೃ.ಬೆ.ಮ.ಪಾಲಿಕೆ, ಎನ್. ಆರ್. ವೃತ್ತರವರ ಮಾಹಿತಿಗೆತರಲು ಆಪ್ತ ಶಾಖೆಗೆ ಕಳುಹಿಸಿದೆ.
2.ಮಾನ್ಯ ವಿಶೇಷ ಆಯುಕ್ತರು (ಆಡಳಿತ) ರವರ ಮಾಹಿತಿಗಾಗಿ ಸಲ್ಲಿಸಿದೆ.
3.ಮಾನ್ಯ ವಿಶೇಷ ಆಯುಕ್ತರು (ಆರೋಗ್ಯ&ಘ.ತ್ಯಾ.ನಿ) ರವರ ಮಾಹಿಗಾಗಿ ಸಲ್ಲಿಸಿದೆ.
4.ಮಾನ್ಯ ಉಪ ಆಯುಕ್ತರು ((ಆಡಳಿತ) ರವರ ಮಾಹಿಗಾಗಿ ಸಲ್ಲಿಸಿದೆ.
5.ಮಾನ್ಯ ಜಂಟಿಆಯುಕ್ತರು (ದಕ್ಷಿಣ) ರವರ ಮಾಹಿಗಾಗಿ ಸಲ್ಲಿಸಿದೆ.
6.ಮುಖ್ಯ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
7.ಕಾರ್ಯಪಾಲಕ ಅಭಿಯಂತರರು.ಬಸವನಗುಡಿರವರ ಅವಗಾಹನೆಗೆ ಸಲ್ಲಿಸಿದೆ.
8.ವಾರ್ಡ್ ಸಮಿತಿ ಸದಸ್ಯರ ಮಾಹಿತಿಗಾಗಿ ಕಳುಹಿಸಿದೆ.
9.ಕಛೇರಿ ಪ್ರತಿ.